ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

ಅಹಲ್ಯಾಬಾಯಿ ಸ್ನಾತಕೋತ್ತರ ಮಹಿಳಾ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ

ಮಹಿಳಾ ಯಜಮಾನ್ಯದ ಕುಟುಂಬಗಳು : ಸ್ತ್ರೀವಾದಿ ಅಧ್ಯಯನ

(ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ. ಅಹಲ್ಯಾಬಾಯಿ ಸ್ನಾತಕೋತ್ತರ ಮಹಿಳಾ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರಕ್ಕೆ ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ) ಪದವಿಗಾಗಿ ಸಾದರ ಪಡಿಸುತ್ತಿರುವ ಸಾರಲೇಖ)

ಸಂಶೋಧನಾ ವಿದ್ಯಾರ್ಥಿನಿ

ವಿಜಯಲಕ್ಷ್ಮಿ. ಅಂಬಿ

ಅಹಲ್ಯಾಬಾಯಿ ಸ್ನಾತಕೋತ್ತರ ಮಹಿಳಾ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

ಮಾರ್ಗದರ್ಶಕರು

ಪ್ರೊ. ಆರ್. ಸುನಂದಮ್ಮ

ಅಹಲ್ಯಾಬಾಯಿ ಸ್ನಾತಕೋತ್ತರ ಮಹಿಳಾ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

2017-18

ಪ್ರಸ್ತಾವನೆ

ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಧಾರ್ಮಿಕವಾಗಿ ಸಾವಿರಾರು ವರ್ಷಗಳಿಂದ ಹೆಣ್ಣನ್ನು ಎರಡನೆಯ ದರ್ಜೆಯವಳನ್ನಾಗಿ ಮಾಡಿ, ಅವಳ ಅಸ್ತಿತ್ವವನ್ನು ತಿರಸ್ಕರಿಸಿದೆ ಈ ಸಮಾಜ. ಆದಿ ಮಾನವನ ಕಾಲದಲ್ಲಿ ಮಹಿಳೆಯರಿಗೆ ಬಂಧನಗಳೇ ಇರಲಿಲ್ಲ. ನಾಗರಿಕತೆಯ ಪೂರ್ವದಲ್ಲಿ ಮಹಿಳೆ ಬಲಿಷ್ಠಳಾಗಿದ್ದಳು. ಅಂದಿನ ಮಾನವರಿಗೆ ಕೊಂದು ತಿಂದು ಬದುಕುವುದೇ ಮುಖ್ಯವಾಗಿತ್ತು. ಆ ಕಾಲದಲ್ಲಿ ಜನರು ಒಂದೆ ಛತ್ತಿನ ಕೆಳಗೆ ಇರುತಿದ್ದರು. ಅಡವಿಗೆ ಹೋಗುವುದು, ಬೇಟೆಯಾಡುವುದು ಮುಖ್ಯ ಕೆಲಸವಾಗಿತ್ತು. ಅಲ್ಲಿ ಮಹಿಳೆಯ ನಾಯಕತ್ವದಲ್ಲೂ ಬೇಟೆಯಾಡುವುದು ಇತ್ತು. ಅವಳು ಯಜಮಾನಿಯಾಗಿದ್ದಳು. ಅವಳಿಗೆ ಬಂಧನ ಇಂದಿನಂತೆ ಇರಲಿಲ್ಲ. ಉತ್ಪನ್ನದ ಮಾಲೀಕತ್ವ ಹೆಣ್ಣಿಗೆ ಇತ್ತು.

ನಾಗರಿಕತೆಯ ಮುಂಚಿನಿಂದಲೂ ಮಾನವ ಸಮಾಜವನ್ನು ಬೆಳೆಸಿರುವವಳು ಸ್ತ್ರೀ. ಅಂದಿನ ಮಾನವರ ಮುಖ್ಯ ಅಗತ್ಯಗಳು ಹಸಿವು ಮತ್ತು ಲೈಂಗಿಕತೆ. ಹಸಿವು ತೀರಿಸಿಕೊಳ್ಳಲು ಬೇಟೆಯಾಡುತಿದ್ದರು, ಲೈಂಗಿಕ ಬಯಕೆಗೆ ಸ್ತ್ರೀ ಮತ್ತು ಪುರುಷ ಹತ್ತಿರ ಬರುತ್ತಿದ್ದರು. ಆಹಾರಕ್ಕಾಗಿ ಕಾಡುಗಳಲ್ಲಿ ಹಣ್ಣು, ಗೆಡ್ಡೆ-ಗೆಣಸುಗಳನ್ನು, ಪ್ರಾಣಿ- ಪಕ್ಷಿಗಳನ್ನು ಕೊಂದು ತಿಂದು ಬದುಕುತ್ತಿದ್ದರು. ಒಂದು ಗುಂಪು ಅಥವಾ ಸಮೂಹ ಮಾಡಿಕೊಂಡು ವಾಸಿಸುತ್ತಿದ್ದರು. ಊಟ ಮತ್ತು ಲೈಂಗಿಕ ಕ್ರಿಯೆಯು ಸಾಮೂಹಿಕವಾಗಿಯೇ ನಡೆಯುತ್ತಿತ್ತು. ಅಲ್ಲಿ ಹೆಣ್ಣು-ಗಂಡು ಎಂಬ ಬೇಧಭಾವವಿರಲಿಲ್ಲ .

ಶಿಲಾಯುಗದಲ್ಲಿ ಹೆಣ್ಣಿಗೆ ಮುಟ್ಟು, ಸಂಭೋಗ, ಗರ್ಭಧರಿಸುವಿಕೆ, ಮಕ್ಕಳನ್ನು ಹೆರುವುದು ಮುಂತಾದ ನೈಸರ್ಗಿಕವಾಗಿ ನಡೆಯುವ ಸಂದರ್ಭದಲ್ಲಿ, ಸ್ವಲ್ಪ ದಿನವಾದರೂ ಒಂದು ಕಡೆ ವಾಸಿಸುವ ಅನಿವಾರ್ಯತೆ ಆಗಿದೆ. ಆ ಸಮಯದಲ್ಲಿ ಪುರುಷರು ಸ್ತ್ರೀಯರನ್ನು ಸುರಕ್ಷಿತವಾದ ಜಾಗದಲ್ಲಿ ಬಿಟ್ಟು, ಬೇಟೆಯಾಡುವುದಕ್ಕೆ ಹೋಗುತ್ತಿದ್ದರು. ಗಂಡಸು ಬೇಟೆಯಾಡಿ ಆಹಾರ ತರುವುದು, ಮಹಿಳೆ ಮಕ್ಕಳ ಪಾಲನೆ, ಮನೆಯ ಎಲ್ಲ ಕೆಲಸದ ಜವಾಬ್ದಾರಿ, ಪುರುಷನ ಲೈಂಗಿಕ ಬಯಕೆಗಳಿಂದಾಗಿ ಮನೆಯಲ್ಲಿಯೇ ಉಳಿಯುವಂತಾಯಿತು. ಹೀಗೆ ಕುಟುಂಬಗಳು ಅಸ್ತಿತ್ವಕ್ಕೆ ಬಂದವು ಎಂದು ಹೇಳಬಹುದು. ಕುಟುಂಬಗಳ ಮೂಲಕ ಹೆಣ್ಣು ನಾಲ್ಕು ಗೋಡೆಗಳ ನಡುವೆ ಇರುವಂತಾಯಿತು. ಅದರ ಜೊತೆಗೆ ಉತ್ಪಾದನಾ ಕೆಲಸದಿಂದ ಹೊರಗುಳಿದಳು. ನಂತರದಲ್ಲಿ ಹಂತ ಹಂತವಾಗಿ ಪುರುಷ ಪ್ರಧಾನ ಸಮಾಜ ಪ್ರಾರಂಭವಾಯಿತು. ಒಂದು ಗುಂಪಿನ ಪ್ರತಿ ಹೆಂಗಸು ಆ ಗುಂಪಿನ ಪ್ರತಿ ಗಂಡಸಿಗೂ ಸೇರಿದವಳಾಗಿದ್ದಳು. ಆವಾಗ ಸ್ವಂತದ್ದು ಎನ್ನುವ ಕಲ್ಪನೆಯೇ ಇರಲಿಲ್ಲ. ಎರಡು ಗುಂಪುಗಳ ನಡುವೆ ಸಂಬಂಧಗಳು ಪ್ರಾರಂಭವಾದವು. ಒಬ್ಬ ಗಂಡಸಿಗೆ ಒಬ್ಬ ಹೆಣ್ಣು ಎಂದಾಯಿತು. ಗಂಡ ಅಥವಾ ಹೆಂಡತಿ ಇಬ್ಬರಲ್ಲಿ ಯಾರೂ ಬೇಕಾದರೂ ಆ ಸಂಬಂಧವನ್ನು ಬಿಡಬಹುದಾಗಿತ್ತು. ಆ ಸಮಯದಲ್ಲಿ ಮಹಿಳೆಗೆ ಎಲ್ಲಾ ಸ್ವತಂತ್ರಗಳು ಇದ್ದವು. ನಂತರದಲ್ಲಿ ಈ ವಿವಾಹ ಪದ್ಧತಿಯು ಏಕಪತಿ ವಿವಾಹ ಎಂದು ನಿಯಮವಾಯಿತು. ಏಕಪತಿ ವಿವಾಹ ಜಾರಿಗೆ ಬಂದಾಗ ಮಹಿಳೆಯ ಸ್ಥಾನ ಕಡಿಮೆಯಾಯಿತು. ಹೆಣ್ಣು ಗಂಡಸಿನ ಅಧೀನಳಾಗಿ, ಭೋಗಿಸುವ ವಸ್ತುವಾಗಿ, ಮಕ್ಕಳನ್ನು ಹೆರುವ ಯಂತ್ರವಾದಳು. ಹುಟ್ಟುವ ಮಗುವನ್ನು ತಂದೆಯಿಂದ ಗುರುತಿಸುವುದು ರೂಢಿಯಾಯಿತು .

ಕ್ರಿ.ಪೂ ೧೨೦೦ ರಿಂದ ಸುಮಾರು ೭೦೦ ವರೆಗೆ ಬ್ರಾಹ್ಮಣ, ಉಪನಿಷತ್ತುಗಳ ಕಾಲವೆಂದು ಗುರುತಿಸಬಹುದು. ಬ್ರಾಹ್ಮಣರ ಪ್ರಾಬಲ್ಯ ಹೆಚ್ಚಿದ ಕಾಲ. ದೈಹಿಕ ಶ್ರಮ ಕೀಳೆನಿಸಿ, ಬೌದ್ಧಿಕ ಶ್ರಮಕ್ಕೆ ಹೆಚ್ಚು ಪ್ರಾಮುಖ್ಯತೆ ಇತ್ತು. ವಿದ್ಯೆಯೆಂದರೆ ಪರಬ್ರಹ್ಮ ಜ್ಞಾನವೆಂದು, ಸ್ತ್ರೀಯರಿಂದಲೂ ಮತ್ತು ಕೆಳಜಾತಿಯವರಿಂದಲೂ ದೂರವಿಡಲಾಯಿತು. ಎಲ್ಲೊ ಗಾರ್ಗಿ, ಲೋಪಾಮುದ್ರೆ ಮತ್ತು ಮೈತ್ರೇಯಿಯರಂತಹ ಮೇಲ್ಜಾತಿಯ ವಿದ್ಯಾವಂತ ಮಹಿಳೆಯರು ಉದಾಹರಣೆಗೆ ಸಿಗುವರು. ಸಾಮಾನ್ಯ ಮಹಿಳೆಯರಿಗೆ ವಿದ್ಯೆ ಸಿಗುವುದು ಅಸಾಧ್ಯವಾಗಿತ್ತು. ಋಗ್ವೇದ ಸಂಹಿತೆಯ ಪ್ರಕಾರ 'ಮದುವೆ' ಎಂಬ ಪದ್ಧತಿ ವೇದಕಾಲಕ್ಕೆ ಬಂದಿತು. ವೇದಗಳ ಕಾಲದಲ್ಲಿ ಹೆಣ್ಣಿನ ಸ್ವಾತಂತ್ರ್ಯ ಮತ್ತು ಸಮಾನ ಸ್ಥಾನಮಾನಕ್ಕೆ ಉದಾಹರಣೆ 'ಸಾಮನ'. ಋಗ್ವೇದದ ಅನೇಕ ಮಂತ್ರಗಳಲ್ಲಿ ಈ ಶಬ್ದವು ಬರುತ್ತದೆ. ಜನರು ಅದನ್ನು(ಸಾಮನ) ಒಂದು ಹಬ್ಬವೆಂದು ಆಚರಿಸುತ್ತಿದ್ದರು.ಈ ಹಬ್ಬದ ಮುಖ್ಯ ಉದ್ದೇಶ ಮನರಂಜನೆ.ಇದಕ್ಕಾಗಿ ಜನರೆಲ್ಲರು ವರ್ಷವಿಡಿ ಕಾಯುತ್ತಿದ್ದರು. ಹೆಣ್ಣು-ಗಂಡುಗಳೆಲ್ಲಾ ಅಂದವಾಗಿ ಸಿಂಗರಿಸಿಕೊಂಡು ತವಕದಿಂದ ಕಾಯುತ್ತಿದ್ದರು. ಋಗ್ವೇದದಲ್ಲಿ ಬರುವ 'ಅಮಜು' ಎಂಬ ಪದ ಮದುವೆಯಾಗಲಾರದೆ,ತಂದೆ ಮನೆಯಲ್ಲಿರುವ ಹೆಣ್ಣು ಮಗಳು ಎಂದು ಸೂಚಿಸುತ್ತದೆ. ಹೀಗೆ ಆ ಕಾಲದಲ್ಲಿ ಮದುವೆ ಕಡ್ಡಾಯವಾಗಿರಲಿಲ್ಲ ಎಂದು ಹೇಳಬಹುದು. ಹೆಣ್ಣು ಮಕ್ಕಳಿಗೂ ಉಪನಯನವಾಗುತ್ತಿತ್ತು. ಗಂಡು ಮಕ್ಕಳಿಲ್ಲದ ಕುಟುಂಬದಲ್ಲಿ ಮಗಳಿಗೆ ಆಸ್ತಿಯಲ್ಲಿ ಹಕ್ಕು ಇತ್ತು. ತಂದೆ – ತಾಯಿಯರ ಅಂತ್ಯಕ್ರಿಯೆಗಳನ್ನು ಮಾಡಲು ಅವಳಿಗೆ ಹಕ್ಕಿತ್ತು. ವಿಧವೆಯರು ಮತ್ತೆ ಮದುವೆ ಮಾಡಿಕೊಳ್ಳಬಹುದಾಗಿತ್ತು. ಅವಿವಾಹಿತಳಾಗಿ ಉಳಿಯುವ ಅವಕಾಶವಿತ್ತು, ವಿವಾಹಿತಳಾದರೂ ಪತಿಯ ನಿಯಂತ್ರಣದಲ್ಲಿರದೆ ತಾನೊಬ್ಬ ಸ್ವತಂತ್ರ ಜೀವಿಯಾಗಿ ಬೆಳೆಯುವ ಅವಕಾಶವಿತ್ತು. ಬಾಲ್ಯವಿವಾಹ ಮತ್ತು ಸಹಗಮನ ಪದ್ಧತಿ ಇರಲಿಲ್ಲ .

ಆದರೆ ವೇದಗಳ ಕಾಲದ ಅಂತ್ಯದಲ್ಲಿ ಧರ್ಮ, ಶಾಸ್ತ್ರಗಳು ಮತ್ತು ಕಠಿಣ ನಿಯಮಗಳಿಂದ ಮಹಿಳೆಯ ಸ್ಥಿತಿ ದಿನ ದಿನಕ್ಕೆ ಶೋಚನೀಯವಾಗುತ್ತಾ ಬಂದಿತು. 'ವಿವಾಹ' ಪದ್ಧತಿಗೆ ನಿಯಮಗಳನ್ನು ಹಾಕಿ, ಆ ಚೌಕಟ್ಟಿನಲ್ಲಿ ಮಹಿಳೆಯನ್ನು ಬಂಧಿಸಲಾಯಿತು. ಸಂಪ್ರದಾಯ, ಆಚರಣೆಗಳು ಮಹಿಳೆಯ ಅಧಃಪತನಕ್ಕೆ ಕಾರಣಗಳಾದವು. ಮಹಿಳೆಗೆ ಮದುವೆಯಾಗುವ ಸ್ವಾತಂತ್ರ್ಯ, ವಿದ್ಯಾಭ್ಯಾಸದ ಅವಕಾಶಗಳು ಕಡಿಮೆಯಾದವು. ಗಂಡಸು ತನ್ನ ಸ್ವಾರ್ಥಕ್ಕಾಗಿ ಅವಳನ್ನು ತನ್ನ ದಾಸಿಯನ್ನಾಗಿ ಮಾಡಿ, ಅವಳು ಮನುಷ್ಯಳು ಎಂಬುದನ್ನು ಮರೆತು, ಕೀಳಾಗಿ ಕಂಡನು. ಸ್ತ್ರೀಯರ ಈ ಪರಿಸ್ಥಿತಿಗೆ ಮನುಸ್ಮೃತಿಯೇ ಕಾರಣ ಎಂದು ಹೇಳಬಹುದು. ಮಹಿಳೆಯರ ಬಗ್ಗೆ ಮನು "ಎಲ್ಲಿ ಸ್ತ್ರೀಯರು ಪುಜಿಸಲ್ಪಡುತ್ತಾರೋ ಅಲ್ಲಿ ದೇವತೆಗಳು ನೆಲೆಸಿರುತ್ತಾರೆ" ಎಂದು ಹೇಳಿದರೂ, ಅವನು ಸ್ತ್ರೀಯರಿಗೆ ಯಾವುದೇ ಸ್ವಾತಂತ್ರ್ಯವನ್ನು ಕೊಡಲಿಲ್ಲ. ಬಾಲ್ಯದಲ್ಲಿ ತಂದೆ, ಯೌವ್ವನದಲ್ಲಿ ಗಂಡ, ಮುಪ್ಪಿನಲ್ಲಿ ಮಗ ಹೀಗೆ ಇವರ ಆಶ್ರಯದಲ್ಲಿ ಇರಬೇಕು. ಹೆಂಗಸು ಸ್ವಾತಂತ್ರ್ಯಕ್ಕೆ ಎಂದಿಗೂ ಯೋಗ್ಯಳಲ್ಲ ಎಂದು ಅವನ ವಾದವಾಗಿತ್ತು. ಮದುವೆ ಎಂದರೆ ಎರಡು ಆತ್ಮಗಳ ಸಮ್ಮಿಲನ. ಸ್ತ್ರೀ ಪುರುಷನಲ್ಲಿ ಕೂಡಿಕೊಳ್ಳುತ್ತಾಳೆ, ಪುರುಷನೆ ಶ್ರೇಷ್ಠನೆಂದು ಮುಖ್ಯವಾಯಿತು. ಇದರಿಂದ ಹೆಣ್ಣು ಮತ್ತು ಗಂಡು ನಡುವಿನ ಅಸಮಾನತೆಗಳು ಹೆಚ್ಚಾದವು. ಹೆಂಡತಿಯಾದವಳು ಗಂಡ ಎಷ್ಟೇ ದುಷ್ಟನಾಗಿದ್ದರೂ ಸಹನೆಯಿಂದ, ತಾಳ್ಮೆಯಿಂದ ಸೇವೆಯನ್ನು ಮಾಡಬೇಕು. ಹೆಂಡತಿ ಗಂಡನಲ್ಲಿ ಕೂಡಿಕೊಂಡ ಮೇಲೆ ಅವಳಿಗೆ ಅವಳ ಮೇಲೆ ಯಾವುದೇ ಹಕ್ಕು ಇಲ್ಲ ಎಂದದ್ದು ಮೇಲೆ ಹೆಣ್ಣಿಗೆ ಯಾವುದೆ ಆಸ್ತಿಯ ಮೇಲೆ ಹಕ್ಕು ಇಲ್ಲ ಎಂದು ನಿರ್ಧಾರವಾಯಿತು. ಹೀಗೆ ಹಂತ ಹಂತವಾಗಿ ಪುರುಷ ಪ್ರಧಾನ ವ್ಯವಸ್ಥೆ ನಿರ್ಮಾಣವಾಯಿತು .

'ವಿವಾಹ' ಮತ್ತು 'ಕುಟುಂಬ' ಈ ಎರಡೂ ಸಂಸ್ಥೆಗಳಿಂದ ಪುರುಷ ಪ್ರಧಾನ ಸಮಾಜ ಹುಟ್ಟಿಕೊಂಡಿತು. ಒಂದು ಸಮಾಜದ ನಿರ್ಮಾಣಕ್ಕೆ ಕುಟುಂಬವು ಮೂಲವಾಗುತ್ತದೆ. ಒಂದು ಕುಟುಂಬದ ಸ್ಥಾಪನೆಗೆ ವಿವಾಹವು ಮುಖ್ಯವಾಗಿ ಕಾರಣವಾಗುತ್ತದೆ. ಮಹಿಳೆಗೆ ಕುಟುಂಬವು ಅತ್ಯಂತ ಪ್ರಮುಖವಾದ ನೆಲೆಯಾಗಿದೆ. ಒಬ್ಬ ವ್ಯಕ್ತಿಯು ಒಂದು ಸಮಾಜದ ಚೌಕಟ್ಟಿನೊಳಗೆ ಹೇಗೆ ಒಳಗಾಗಬೇಕೆನ್ನುವುದು ಕುಟುಂಬವು ಕಲಿಸುತ್ತದೆ. ಇದನ್ನೇ ಸಾಮಾಜೀಕರಣ ಎನ್ನುವರು. ಸಾಮಾಜೀಕರಣವು ಪ್ರತಿಯೊಬ್ಬರ ಜೀವನವನ್ನು ರೂಪಿಸುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಸಾಮಾಜೀಕರಣದಲ್ಲಿ ಕಲಿಕೆಯಿಂದ ಪಡೆಯುವ ಜ್ಞಾನ ಮತ್ತು ಒತ್ತಾಯವಾಗಿ ಮಾಡಲೇಬೇಕಾದ ರೀತಿ-ನೀತಿಗಳು ಒಳಗೊಂಡಿರುತ್ತವೆ. ಇಂಥ ಸಾಮಾಜೀಕರಣದಲ್ಲಿ ಮಹಿಳೆಗೆ ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಇಲ್ಲ. ಇದರಿಂದ ತನ್ನನ್ನು ತಾನು ಸಮಾಜಕ್ಕೆ ತಕ್ಕಂತೆ ಹೊಂದಾಣಿಕೆ ಮಾಡಿಕೊಳ್ಳುವುದು ಮಹಿಳೆಗೆ ಅನಿವಾರ್ಯವಾಗುತ್ತದೆ. ಸ್ತ್ರೀ ಮತ್ತು ಪುರುಷರಿಬ್ಬರೂ ಸಮಾಜದಲ್ಲಿರುವ ವ್ಯಕ್ತಿಗಳೇ ಆಗಿದ್ದರೂ, ಹೆಣ್ಣು ಗಂಡಸಿನ ಅಧೀನಕ್ಕೆ ಒಳಗಾಗಿ, ಆತನ ನಿರೀಕ್ಷೆಗೆ ತಕ್ಕಂತೆ ವರ್ತಿಸುತ್ತಾಳೆ. ಒಂದು ಹೆಣ್ಣು ಬದುಕಿನ ಬಗ್ಗೆ ಹೊಂದಿರುವ ಆಸೆ- ಆಕಾಂಕ್ಷೆ, ತೊಂದರೆಗಳು, ಅಭಿಪ್ರಾಯ ಇವ್ಯಾವುಗಳನ್ನು ತಂದೆ-ತಾಯಿ ತಿಳಿದುಕೊಳ್ಳಲು ಪ್ರಯತ್ನ ಮಾಡುವುದಿಲ್ಲ. ಕುಟುಂಬದ ಇತರ ಸದಸ್ಯರಿಗಾಗಿ ತನ್ನೆಲ್ಲಾ ಆಸೆಗಳನ್ನು ತ್ಯಾಗ ಮಾಡುತ್ತಾಳೆ. ಮದುವೆ ತಡವಾದರೆ ಸಮಾಜ ಅವಳನ್ನು ನೋಡುವ ದೃಷ್ಟಿ ಬೇರೆಯಾಗಿರುತ್ತದೆ. ಒಬ್ಬ ಸ್ತ್ರೀ ಮದುವೆಯಾದರೆ ಬರೀ ಗಂಡ ಅಲ್ಲ ಮತ್ತೊಂದು ಇಡೀ ಕುಟುಂಬ ಅವಳದಾಗುತ್ತದೆ. ವರ್ಜೀನೀಯಾ ವುಲ್ಫ್ ಹೇಳುವಂತೆ "ಇಡೀ ಮನೆ ಆಕೆಯದಾದರೂ ಅವಳಿಗಾಗಿ ಒಂದು ಪ್ರತ್ಯೇಕ ಕೋಣೆ ಇರುವುದಿಲ್ಲ"

ಹೆಣ್ಣು ಅನುಭವಿಸುತ್ತಿರುವ ಎಲ್ಲಾ ಸಮಸ್ಯೆಗಳಿಗೆ ಪುರುಷ ಪ್ರಧಾನ ಸಮಾಜ ಹುಟ್ಟು ಹಾಕಿದ ಸಂಪ್ರದಾಯ, ಆಚರಣೆ, ಕಠಿಣ ನಿಯಮಗಳೇ ಕಾರಣ. ಇವತ್ತಿಗೂ ಧರ್ಮಶಾಸ್ತ್ರ ಮತ್ತು ಸೂತ್ರಗಳಿಂದ ಹೆಣ್ಣನ್ನು ಕಟ್ಟಿಹಾಕಲಾಗಿದೆ .

ಮಹಿಳಾ ಯಜಮಾನ್ಯದ ಕುಟುಂಬದ ಅರ್ಥ

ನಾವು ಸಾಮಾನ್ಯವಾಗಿ ಜಗತ್ತಿನಾದ್ಯಂತ ಪುರುಷನೇ ಕುಟುಂಬದ ಯಜಮಾನ/ಮುಖ್ಯಸ್ಥನಾಗಿರುವುದನ್ನು ಕಾಣುತ್ತೇವೆ. ಇಂಥ ಕುಟುಂಬಗಳನ್ನು ಪಿತೃ ಪ್ರಧಾನ ಕುಟುಂಬಗಳು ಎನ್ನುವರು. ಆದರೆ ಇತ್ತೀಚೆಗೆ ಏಕ ಪೋಷಕ ಕುಟುಂಬಗಳು ಹೆಚ್ಚಾಗುತ್ತಿವೆ. ಏಕ ಪೋಷಕ ಕುಟುಂಬಗಳು ಎಂದರೆ ತಂದೆ ಅಥವಾ ತಾಯಿ ಒಬ್ಬರು ಮಾತ್ರ ಪೋಷಕತ್ವಕ್ಕೆ ಕಾರಣದವರಾಗಿರುತ್ತಾರೆ. ಮಕ್ಕಳ ಸಂಪೂರ್ಣ ಹೊಣೆಗಾರಿಕೆಯನ್ನು ತಾಯಿಯೇ ಹೊರುವ ಕುಟುಂಬಗಳು ಇಂದು ಹೆಚ್ಚಾಗುತ್ತಿವೆ. ಇದಕ್ಕೆ ಹಲವಾರು ಕಾರಣಗಳಿವೆ. ಆಧುನಿಕತೆಯ ಸಂದರ್ಭದಲ್ಲಿ ಕಲಹಗಳಿಂದ ವಿಚ್ಛೇದನಗಳು ಮತ್ತು ಬೇರ್ಪಡುವಿಕೆ ಹೆಚ್ಚಾಗುತ್ತಿವೆ.ಮಹಿಳೆಯರೇ ಯಜಮಾನಿಯಾಗಿರುವ ಕುಟುಂಬಗಳನ್ನು ಮಹಿಳಾ

ಯಜಮಾನ್ಯದ ಕುಟುಂಬ ಎನ್ನುವರು. ಈಗ ಭಾರತದಲ್ಲಿ ೨೦೧೧ರ ಜನಗಣತಿಯ ಪ್ರಕಾರ ೨೭ ಮಿಲಿಯನ್ ಮಹಿಳಾ ಯಜಮಾನ್ಯದ ಕುಟುಂಬಗಳಿವೆ. ಶೇ೭೫ರಷ್ಟು ಗ್ರಾಮೀಣದಲ್ಲಿ ಹಾಗೂ ಶೇ೨೫ರಷ್ಟು ನಗರಗಳಲ್ಲಿವೆ.

ಗಂಡನ ವಲಸೆ ಅಥವಾ ಮರಣ, ಕಲಹಗಳು, ಬೇರ್ಪಡುವಿಕೆ ಮತ್ತು ವಿಚ್ಛೇದನಗಳು ಈ ಎಲ್ಲ ಕಾರಣಗಳಿಂದ ಮಹಿಳಾ ಯಜಮಾನ್ಯದ ಕುಟುಂಬಗಳನ್ನು ನೋಡುತ್ತೇವೆ. ಮಹಿಳಾ ಯಜಮಾನ್ಯದ ಕುಟುಂಬ ಎಂದರೆ ಪುರುಷನ ಬದಲಾಗಿ ಮಹಿಳೇಯೇ ಆ ಕುಟುಂಬಕ್ಕೆ ಮುಖ್ಯ ಉತ್ಪಾದಕಳಾಗಿರುತ್ತಾಳೆ. ಇಂಥ ಕುಟುಂಬಗಳಿಗೆ ವಿಧವೆ, ವಿಚ್ಛೇದಿತೆ, ಬೇರ್ಪಟ್ಟ ಅಥವಾ ಅವಿವಾಹಿತೆಯಾದ ಅಥವಾ ಜೋಗತಿ(ದೇವದಾಸಿ) ಮಹಿಳೆಯರು ಯಜಮಾನಿಯಾಗಿರುತ್ತಾರೆ .

ವ್ಯಾಖ್ಯೆಗಳು

- ಡಿಜ್ಯೂರ ಪ್ರಕಾರ "ಸಾಮಾನ್ಯವಾಗಿ ವಿಧವೆ, ಬೇರ್ಪಟ್ಟ, ವಿಚ್ಛೇದಿತೆ ಅಥವಾ ಅವಿವಾಹಿತ ಮಹಿಳೆಯರು ಕುಟುಂಬಕ್ಕೆ ಯಜಮಾನಿಯಾಗಿರುತ್ತಾರೆ".
- ಆಯ್.ಎಲ್.ಓ ಪ್ರಕಾರ "ಕುಟುಂಬದಲ್ಲಿ ವಯಸ್ಕ ಪುರುಷನು ಇರುವುದಿಲ್ಲ, ಅದರ ಪರಿಣಾಮವಾಗಿ ವಿಧವೆ, ಬೇರ್ಪಟ್ಟ, ಅವಿವಾಹಿತೆ ಅಥವಾ ವಿಚ್ಛೇದಿತೆಯರಿರುತ್ತಾರೆ, ಪುರುಷನಿದ್ದಾಗಲೂ ಕೂಡ ಆರ್ಥಿಕವಾಗಿ ಅವನ ಕೊಡುಗೆ ಆ ಕುಟುಂಬಕ್ಕೆ ಇರುವುದಿಲ್ಲ".

ಒಟ್ಟಿನಲ್ಲಿ ಹೇಳುವುದಾದರೆ ಮಹಿಳಾ ಯಜಮಾನ್ಯದ ಕುಟುಂಬಗಳು ಎಂದರೆ ಕುಟುಂಬಕ್ಕೆ ಮಹಿಳೆಯರ ಆರ್ಥಿಕ ಕೊಡುಗೆಯ ಮಟ್ಟದ ಮೇಲೆ ಅವಲಂಬನೆಯಾಗಿರುತ್ತದೆ. ಪುರುಷರ ಅನುಪಸ್ಥಿತಿಯು ಮಹಿಳೆಯರೇ ಯಜಮಾನ್ಯವನ್ನು ವಹಿಸಿಕೊಳ್ಳಬೇಕಾಗುತ್ತದೆ. ಇವರೇ ಕುಟುಂಬದ ಎಲ್ಲ ಜವಾಬ್ದಾರಿಗಳನ್ನು ವಹಿಸುವವರಾಗಿರುತ್ತಾರೆ.

ಅಧ್ಯಯನದ ಮಹತ್ವ ಮತ್ತು ಅಗತ್ಯ

ಮಹಿಳಾ ಯಜಮಾನಿಕೆಯ ಕುಟುಂಬಗಳು ಮಹಿಳಾ ಜನಸಂಖ್ಯೆಯ ಭಾಗವಾಗಿರುವುದರಿಂದ, ಅವರ ಸಶಕ್ತಿಕರಣದ ಕುರಿತು ಚರ್ಚಿಸುವುದು ಅಗತ್ಯವಾಗಿದೆ. ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಆ ಮಹಿಳೆಯರ ಜೀವನ ಮಟ್ಟವನ್ನು ಹಾಗೂ ಸಮಾಜದಲ್ಲಿ ಇಂಥ ಕುಟುಂಬಗಳ ಸ್ಥಾನವನ್ನು ಗುರುತಿಸುವುದು. ಪಿತೃ ಪ್ರಧಾನ ಕುಟುಂಬಗಳಿಗಿಂತ ಮಹಿಳಾ ಯಜಮಾನಿಕೆಯ ಕುಟುಂಬಗಳಲ್ಲಿ ಆಸ್ತಿಯ ಹಕ್ಕು ಮತ್ತು ಸಂಪನ್ಮೂಲಗಳ ಮೇಲಿನ ಅಧಿಕಾರ ಬೇರೆ ರೀತಿಯದ್ದಾಗಿರುವುದರಿಂದ, ಈ ವ್ಯತ್ಯಾಸವನ್ನು ನೋಡುವುದು. ಪುರುಷ ಪ್ರಧಾನ ಸಮಾಜದಲ್ಲಿ ಇಂಥ ಕುಟುಂಬಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು

ನಡೆಸುವ ಹೋರಾಟ, ಅಂತಹ ಕುಟುಂಬಗಳ ಕುರಿತ ಸಾಮಾಜಿಕ ದೃಷ್ಟಿಕೋನ ಅರಿಯುವುದು ಮುಖ್ಯವಾಗಿದೆ. ಈ ಮಹಿಳೆಯರು ಮನೆಯ ಜವಾಬ್ದಾರಿ ಮತ್ತು ಹೊರಗಿನ ಕೆಲಸವನ್ನು ಸಮರ್ಪಕವಾಗಿ ನಿಭಾಯಿಸುವುದನ್ನು ದಾಖಲಿಸುವುದು. ಇದಲ್ಲದೆ ಜಾಗತಿಕ ಸಂದರ್ಭದಲ್ಲೂ ಮಹಿಳೆಯರ ಬಡತನದ ಸ್ತ್ರೀಕರಣ ಹೆಚ್ಚಾಗುತ್ತಿದ್ದು, ಮಹಿಳಾ ಯಜಮಾನ್ಯದ ಕುಟುಂಗಳೇ ಬಡತನಕ್ಕೆ ಹೆಚ್ಚಾಗಿ ಒಳಗಾಗುತ್ತಿವೆ. ಬಡತನ ಮಹಿಳೆಯರನ್ನು ಆವರಿಸಿಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಮಹಿಳಾ ಯಜಮಾನ್ಯದ ಕುಟುಂಬಗಳ ಅಧ್ಯಯನ ಮಹತ್ವವಾಗಿದೆ.

ಉದ್ದೇಶಗಳು

- ಮಹಿಳಾ ಯಜಮಾನ್ಯದ ಕುಟುಂಬದಲ್ಲಿ ಮಹಿಳೆಯರ ಸಾಮಾಜಿಕ, ಆರ್ಥಿಕ, ಮತ್ತು ಸಾಂಸ್ಕೃತಿಕ ಸ್ಥಾನ–ಮಾನವನ್ನು ಹಾಗೂ ಆರೋಗ್ಯದ ಸ್ಥಿತಿಯನ್ನು ತಿಳಿಯುವುದು .
- ಪ್ರಸ್ತುತದಲ್ಲಿ ಈ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆ ಮತ್ತು ಸವಾಲುಗಳನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಅಧ್ಯಯನ ಮಾಡುವುದು .
- ಆಸ್ತಿಯ ಕುರಿತು ಇವರ ಪರಿಕಲ್ಪನೆಯನ್ನು ಗ್ರಹಿಸುವುದು .
- ಏಕಪೋಷಕರಾಗಿ ಈ ಮಹಿಳೆಯರ ಅನುಭವಗಳನ್ನು ದಾಖಲಿಸುವುದು .
- ಮಹಿಳಾ ಯಜಮಾನ್ಯದ ಕುಟುಂಬಗಳ ಬಗ್ಗೆ ಸಮಾಜದಲ್ಲಿರುವ ಜನರ ನಡವಳಿಕೆಗಳನ್ನು ತಿಳಿಯುವುದು .

ವೈಧಾನಿಕತೆ

ಈ ಅಧ್ಯಯನಕ್ಕೆ ಸ್ತ್ರೀವಾದಿ ಸಂಶೋಧನಾ ವಿಧಾನವನ್ನು ಅಳವಡಿಸಿಕೊಳ್ಳಲಾಗುವುದು. ಸ್ತ್ರೀವಾದಿ ಸಂಶೋಧನಾ ವಿಧಾನವು, ಸ್ತ್ರೀ ಪರವಾಗಿದ್ದು ಹಾಗೂ ಸ್ತ್ರೀ ದೃಷ್ಟಿಕೋನವನ್ನು ಹೊಂದಿರುತ್ತದೆ. ಸ್ತ್ರೀವಾದಿ ಸಂಶೋಧನೆಯು ಮಹಿಳೆಯರ ನಿಜ ಸ್ಥಿತಿಯನ್ನು ಯಥಾವತ್ತಾಗಿ ತೋರಿಸುತ್ತದೆ. ಉತ್ತರ ಕರ್ನಾಟಕದ ಈ ಮೂರು ಜಿಲ್ಲೆಗಳಿಂದ(ಬೆಳಗಾವಿ, ಗುಲಬರ್ಗಾ ಮತ್ತು ವಿಜಯಪುರ) ಕ್ಷೇತ್ರಕಾರ್ಯದ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗುವುದು. ಈ ಅಧ್ಯಯನದಲ್ಲಿ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿಕೊಂಡ ಮಾಹಿತಿಯನ್ನು ಸ್ತ್ರೀಪರ ದೃಷ್ಟಿಕೋನದಿಂದ ವಿಶ್ಲೇಷಿಸಲಾಗುತ್ತದೆ. ಮಾಹಿತಿ ಸಂಗ್ರಹಣೆಗಾಗಿ ಗುಣಾತ್ಮಕ ವಿಧಾನವನ್ನು ಅಳವಡಿಸಿಕೊಳ್ಳಲಾಗುವುದು. ಏಕೆಂದರೆ ಗುಣಾತ್ಮಕ ವಿಧಾನವು ವ್ಯಕ್ತಿನಿಷ್ಠತೆಯಿಂದ ಕೂಡಿರುತ್ತದೆ. ಸಂದರ್ಶನ ಮತ್ತು ಪ್ರಕರಣ ಅಧ್ಯಯನದ ಮೂಲಕ ಮಾಹಿತಿಯನ್ನು ತೆಗೆದುಕೊಳ್ಳಲಾಗುವುದು. ಇದಕ್ಕೆ ಸಂಬಂಧಿಸಿದಂತೆ ಕುಟುಂಬದ ಗಾತ್ರ, ಉದ್ಯೋಗ, ಶಿಕ್ಷಣದ ಮಟ್ಟ, ಕೂಲಿ ಸಂಬಳ, ಸಾಮಾಜಿಕ ಸಂಬಂಧಗಳು, ಜೀವನದ ಸ್ಥಿತಿ ಮತ್ತು ಸಾಲ, ಭೂಮಿ ಹೊಂದುವಿಕೆ ಕುರಿತು ಹೀಗೆ ಪ್ರಾಥಮಿಕ ಮೂಲಗಳಿಂದ ಹಾಗೂ ದಿನ ಪತ್ರಿಕೆ, ಜನಸಂಖ್ಯೆ ವರದಿ,

ಸರಕಾರಿ ದಾಖಲೆ, ಲೇಖನಗಳು ಮುಂತಾದ ಅನುಷಂಗಿಕ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗುವುದು .

ವ್ಯಾಪ್ತಿ

ಮಹಿಳಾ ಯಜಮಾನ್ಯದ ಕುಟುಂಬಗಳ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಕುರಿತು ಅಧ್ಯಯನಗಳು ನಡೆದಿಲ್ಲ. ಆದ್ದರಿಂದ ಆಳವಾದ ಅಧ್ಯಯನ ನಡೆಸುವ ಸಲುವಾಗಿ ವಾಪ್ತಿಗೆ ಈ ಮೂರು ಜಿಲ್ಲೆಗಳನ್ನು(ಬೆಳಗಾವಿ, ಗುಲಬರ್ಗಾ ಮತ್ತು ವಿಜಯಪುರ) ಮಾತ್ರ ಆಯ್ಕೆ ಮಾಡಿಕೊಳ್ಳಲಾಗುವುದು. ವಿಜಯಪುರ ಹಿಂದುಳಿದ ಜಿಲ್ಲೆಯಾಗಿದ್ದು, ಬಾಲ್ಯವಿವಾಹ ಮತ್ತು ದೇವದಾಸಿ ಪದ್ದತಿ ಹೆಚ್ಚಾಗಿದೆ. ಹಾಗೂ ಮಳೆಯಾಧಾರಿತ ಕೃಷಿ ಪದ್ಧತಿಯಾಗಿದೆ. ಗಡಿ ಜಿಲ್ಲೆಯಾದ್ದರಿಂದ ಹೆಣ್ಣು ಮಕ್ಕಳ ಅನೈತಿಕ ಮಾರಾಟ ನಡೆಯುತ್ತದೆ. ಬೆಳಗಾವಿ ಕರ್ನಾಟಕದ ಗಡಿ ಜಿಲ್ಲೆಯಾಗಿದೆ. ಇಲ್ಲಿ ಮಹಾರಾಷ್ಟ್ರದ ಪ್ರಭಾವ ಹೆಚ್ಚಾಗಿರುವುದರಿಂದ, ಭಾಷಾ ಮತ್ತು ಗಡಿ ಸಮಸ್ಯೆಯನ್ನು ಎದುರಿಸುತ್ತಿದೆ. ಹೆಚ್ಚು ಕೈಗಾರಿಕೆಗಳನ್ನು ಹೊಂದಿದ್ದು, ಶೈಕ್ಷಣಿಕವಾಗಿ ಮುಂದುವರೆದಿದೆ. ಗುಲಬರ್ಗಾ ಹೈದರಾಬಾದ್-ಕರ್ನಾಟಕ ಪ್ರದೇಶದಲ್ಲಿ ಬರುವ ಜಿಲ್ಲೆಯಾಗಿದೆ. ರಾಜಕೀಯವಾಗಿ ಹೆಚ್ಚು ಪ್ರಭಾವ ಹೊಂದಿದೆ. ಇಲ್ಲಿಯೂ ಕೂಡ ಬಾಲ್ಯವಿವಾಹ ಮತ್ತು ದೇವದಾಸಿ ಪದ್ಧತಿ ಆಚರಣೆಯಲ್ಲಿದೆ.

ಇತಿಮಿತಿಗಳು

- ಈ ಅಧ್ಯಯನವು ಉತ್ತರ ಕರ್ನಾಟಕದ ಬೆಳಗಾವಿ, ಗುಲಬರ್ಗಾ ಮತ್ತು ವಿಜಯಪುರ ಈ ಮೂರು ನಗರಗಳ ಕೊಳಚೆ ಪ್ರದೇಶಕ್ಕೆ ಮಾತ್ರ ಸೀಮಿತಗೊಳಿಸಲಾಗುವುದ
- ಮಹಿಳೆಯರೇ ಯಜಮಾನಿಯಾಗಿರುವ ಕುಟುಂಬಗಳನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗುವುದು.
- ಈ ಅಧ್ಯಯನವು ಒಟ್ಟು ೨೫೦ ವಕ್ತೃಗಳಿಗೆ ಸೀಮಿತಗೊಳಿಸಲಾಗಿದೆ.

ಉಪಸಂಹಾರ

ಒಟ್ಟಿನಲ್ಲಿ ಹೆಣ್ಣಿನ ಸ್ಥಿತಿಯು ವೇದಕಾಲದಿಂದಲೂ ಇಲ್ಲಿಯವರೆಗೂ ಹಂತ ಹಂತವಾಗಿ ಶೋಚನೀಯವಾಗುತ್ತಾ ಬಂದಿದೆ. ಇವತ್ತಿನ ಜಾಗತೀಕರಣದ ಸಂದರ್ಭದಲ್ಲಿ ಮಹಿಳಾ ಯಜಮಾನ್ಯದ ಕುಟುಂಬಗಳು ಅನೇಕ ಸಮಸ್ಯೆ ಮತ್ತು ಸವಾಲುಗಳನ್ನು ಎದುರಿಸುತ್ತಿವೆ. ಆಧುನೀಕರಣ, ನಗರೀಕರಣ ಮತ್ತು ಕೈಗಾರಿಕೀಕರಣ ಪ್ರಕ್ರಿಯೆಯಿಂದ, ಇಂಥ ಕುಟುಂಬಗಳ ಮಹಿಳೆಯರ ಜೀವನ ಕಷ್ಟವಾಗುತ್ತಿದೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳಾ ಯಜಮಾನಿಕೆಯ ಕುಟುಂಬಗಳು ಅನೇಕ ಅಸಮಾನತೆಗಳನ್ನು ಎದುರಿಸುತ್ತಿವೆ. ಸರ್ಕಾರವು ಇಂಥ ಕುಟುಂಬಗಳ ಸಶಕ್ತಿಕರಣಕ್ಕಾಗಿ

ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ರೂಪಿಸಬೇಕು. ಈ ಕುಟುಂಬಗಳ ಬಗ್ಗೆ ಇರುವ ಸಮಾಜದ ದೃಷ್ಟಿಕೋನ ಬದಲಾಗಬೇಕು.

ಆಕರ ಗ್ರಂಥಗಳು

- 'ಮಹಿಳಾ ಅಸ್ತಿತ್ವದ ಹುಡುಕಾಟ' ,ಡಾ. ಶ್ರೀದೇವಿ .ಆಲೂರ ,ಶ್ರೀ ಸಿದ್ಧಲಿಂಗೇಶ್ವರ ಬುಕ್ ಡಿಪೊ ,ಪ್ರಥಮ ಮುದ್ರಣ –೨೦೧೦ .
- 'ಕುದಿ ಎಸರು',ಡಾ. ವಿಜಯಾ, ನಾಕುತಂತಿ ಪ್ರಕಾಶನ ,ಬೆಂಗಳೂರು ,ಪ್ರಥಮ ಮುದ್ರಣ–೨೦೧೭ .
- 'ಮಹಿಳೆ– ಮದುವೆ ಮತ್ತು ವಿಚ್ಛೇದನ',ಡಾ.ಸರಸ್ವತಿ ಚಿಮ್ಮಲಗಿ ,ಶಿವಗಂಗಾ ಪ್ರಕಾಶನ ,ವಿಜಯಪುರ ,ಪ್ರಥಮ ಮುದ್ರಣ–೨೦೦೯.
- 'ಸ್ತ್ರೀವಾದ',ಡಾ. ಎಚ್.ಎಸ್.ಶ್ರೀಮತಿ ,ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ಪ್ರಥಮ ಮುದ್ರಣ–೨೦೦೩ .
- 'ಕುಂಚಿ ಕೊರವ ಮಹಿಳೆಯರನ್ನು ವಿವಿಧ ಯೋಜನೆಗಳ ಫಲಾನುಭವಿಗಳನ್ನಾಗಿಸಿ ,ಸಬಲೀಕರಣಗೊಳಿಸುವ ಪ್ರಾಯೋಗಿಕ ಅಧ್ಯಯನ'೨೦೧೨ ,ಮಹಾಪ್ರಬಂಧ ,ಶ್ರೀದೇವಿ .ಎಲ್.
- 'ಮಹಿಳಾ ಅಧ್ಯಯನ', ಸುಧಾ ಸಿತಾರಾಮನ್ ,ಸ್ತ್ರೀಲೇಖ ಪ್ರಕಟಣೆ ಬೆಂಗಳೂರು, ಪ್ರಥಮ ಮುದ್ರಣ–೨೦೧೦ .
- 'ಸಂಶೋಧನ ಸ್ವರೂಪ' ,ಡಾ. ಬಿ.ವ್ಹಿ.ಶಿರೂರ .
- 'ಮಾತೃ ಪ್ರಧಾನ ಪರಿಕಲ್ಪನೆ' ,ಡಾ. ಶೈಲಜಾ .ಹೀರೆಮಠ ,ಪ್ರಸಾರಾಂಗ ಕನ್ನಡ ವಿಶ್ವ ವಿದ್ಯಾಲಯ ಹಂಪಿ .
- 'ಮಹಿಳೆ ಮತ್ತು ಸಮಾಜ' ,ಡಾ. ವಿಜಯಕುಮಾರಿ .ಎಸ್.ಕರಿಕಲ್ .
- 'ಗ್ರಾಮೀಣ ಮಹಿಳಾ ಸಬಲೀಕರಣ',ಪ್ರೊ .ಸಿ.ವ್ಹಿ .ಕಲಬುರ್ಗಿ ,ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ ,ಪ್ರಕಾಶಕರು ಪ್ರೊ .ಬಸವರಾಜ .ಪೋಲಿಸ್ ಪಾಟೀಲ ,ಪ್ರಥಮ ಮುದ್ರಣ –೨೦೧೨ .
- 'ಗ್ರಾಮೀಣ ಮಹಿಳಾ ಲೋಕ' ,ಬಿ.ಸಿ.ಶೈಲಜಾ ನಾಗರಾಜ್,ಪ್ರಕಾಶನ ಸಿವಿಜಿ ಪ್ರಕಟಣೆ ಬೆಂಗಳೂರು ,ಪ್ರಥಮ ಮುದ್ರಣ–೨೦೦೮.
- 'ಮಹಿಳಾ ಸಾಮಾಜಿಕತೆ',ಡಾ .ಜ್ಯೋತಿ ಶಶಿಕುಮಾರ್,ಪ್ರಕಾಶನ ಕನ್ನಡ ವಿಶ್ವವಿದ್ಯಾಲಯ ಹಂಪಿ ,ಪ್ರಥಮ ಮುದ್ರಣ–೨೦೦೭.
- 'ಮಹಿಳಾ ಚಳುವಳಿ', ಡಾ.ಹಾಲತಿ ಸೋಮಶೇಖರ ,ವಿಸ್ಮಯ ಪ್ರಕಾಶನ ,ಪ್ರಥಮ ಮುದ್ರಣ–೨೦೦೭ .

- ‘ಮಾತೆಯರು ಮಾನ್ಯರಾಗಿದ್ದಾಗ’ ದೇವಿಪ್ರಸಾದ್ ಚಟ್ಟೋಪಾದ್ಯಾಯ ,ಅನುವಾದ–ಜಿ.ಕುಮಾರಪ್ಪ ,ನವಕರ್ನಾಟಕ ಪ್ರಕಾಶನ ಬೆಂಗಳೂರು ,ಪ್ರಥಮ ಮುದ್ರಣ–೧೯೯೭ .
- ‘ಎಚ್ಚೆತ್ತ ಹಾದಿಯಲ್ಲಿ ಮಹಿಳೆ’, ಚಿ.ನ .ಮಂಗಳಾ ,ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ ,ಪ್ರಥಮ ಮುದ್ರಣ–೧೯೯೦.
- ‘ಮಹಿಳೆ ಸಮಾಜ ಮತ್ತು ಸವಾಲುಗಳು’ ,ಪ್ರೇಮಾ ಸಿರ್ಸೆ ,ಕನ್ನಡ ಸಾಹಿತ್ಯ ಪರಿಷತ್ತು ,ಬೆಂಗಳೂರು ,ಪ್ರಥಮ ಮುದ್ರಣ–೨೦೦೬.
- ಲೇಖನ –ಲಿಂಗತಾರತಮ್ಯ :ವಿವಾಹ, ಡಾ. ಕಲಾಶ್ರೀ ಎಚ್.ಎಮ್.ಪುಸ್ತಕ–ಮಹಿಳಾ ಪ್ರಚಲಿತ ವಿಷಯ .ಪ್ರಸಾರಾಂಗ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ,ವಿಜಯಪುರ .ಪ್ರಥಮ ಮುದ್ರಣ –೨೦೧೩.
- **Perspectives On Women’s Issues, vol 2,Edited by;Dr.Kishori Nayak.(Report of research projects conducted by the centre during 10th plan). First published -2010. Centre for Women’s studies, Mangalore University.**
- **Female Headed Household, Author S.N. Tripathy,First published-2005. Sonali publication.**